ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 07.06.2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದಃ**

6) ನನ್ನ ಮತ್ತು ಪ್ರತಿವಾದಿ ನಡುವೆ ಸಂಬಂಧ ಇದೆ ಎಂದು ತೋರಿಸುವ ದಾಖಲೆಗಳನ್ನು ನಾನು ಹಾಜರು ಮಾಡಿಲ್ಲ. ನಿಪಿ-2 ಕ್ರಯಪತ್ರದ ಮೂಲ ದಾಖಲೆ ದ್ಯಾವಣ್ಣನ ಬಳಿ ಇತ್ತು ಎಂದು ಯಾವುದಾದರೂ ದಾಖಲೆ ಹಾಜರು ಮಾಡಿದ್ದೀರಾ? ಎಂದು ಕೇಳಿದ್ದು, ಒಂದು ಮೂಲ ದಾಖಲೆ ಒಬ್ಬ ಖಾಸಗಿ ವ್ಯಕ್ತಿಯ ಬಳಿ ಇರುವ ಬಗ್ಗೆ ದಾಖಲೆ ಹಾಜರು ಮಾಡಲು ಅವಕಾಶವಿಲ್ಲದ ಕಾರಣ ಪ್ರಶ್ನೆ ಸಮಂಜಸವಲ್ಲವೆಂದು ಬೇರೆ ಪ್ರಶ್ನೆ ಕೇಳುವಂತೆ ಸೂಚಿಸಿದ ನಂತರ ನಿಪಿ-2 ರ ಮೂಲ ಕ್ರಯಪತ್ರ ದ್ಯಾವಣ್ಣನ ಬಳಿ ಇತ್ತು ಎಂದು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿಯು ನನ್ನ ತಂದೆ ಇದ್ದಾಗ ಅವರು ನನಗೆ ಆ ಬಗ್ಗೆ ಹೇಳಿದ್ದರು ಎಂದು ಉತ್ತರಿಸಿದ್ದಾರೆ. ನಿಪಿ-19 ರಿಂದ ನಿಪಿ-31 ರ ಪಹಣಿಗಳು ಯಾರ ಹೆಸರಿನಲ್ಲಿ ನಮೂದಾಗಿವೆ ಎಂದರೆ ದ್ಯಾವಣ್ಣನ ಹೆಸರಿನಲ್ಲಿ ನಮೂದಾಗಿವೆ.

**ಮರು ವಿಚಾರಣೆ - ಇಲ್ಲಾ.**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**